**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 21-07-2025**

**ಪಾಟೀಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ-**

ಅಸಲು ದಾವೆ 327/2022 ರಲ್ಲಿ ನನಗೆ ಹಾಗೂ ನನ್ನ ಮೈನರ್ ಮಕ್ಕಳಿಗೆ ಸಮನ್ಸ್ ಬಂದಿತ್ತು ಎಂದರೆ ಸರಿ. ಅಸಲು ದಾವೆಯಲ್ಲಿ ನಾನು ನನ್ನ ವಕೀಲರ ಮೂಲಕ ಹಾಜರಾಗಿದ್ದೆ ಎಂದರೆ ಸರಿ. ಅಸಲು ದಾವೆಯಲ್ಲಿ ಮುಂದಿನ ಹಿಯರಿಂಗ್ ದಿನಾಂಕದ ಬಗ್ಗೆ ನಮ್ಮ ವಕೀಲರು ನನಗೆ ಮಾಹಿತಿ ನೀಡಿದ್ದರು. ನಂತರ ಹಿಯರಿಂಗ್ ದಿನಾಂಕಗಳಲ್ಲಿ ನ್ಯಾಯಾಲಯಕ್ಕೆ ಹಾಜರಾದ ಬಗ್ಗೆ ನನಗೆ ತಿಳಿದಿಲ್ಲ. ನಮ್ಮ ವಕೀಲರು ನಮ್ಮ ಪರವಾಗಿ ನ್ಯಾಯಾಲಯಕ್ಕೆ ತಾವೇ ಹಾಜರಾಗುವುದಾಗಿ ಹೇಳುತ್ತಿದ್ದ ಕಾರಣದಿಂದ ನಾವು ಹಿಯರಿಂಗ್ ದಿನಾಂಕಗಳಲ್ಲಿ ಹಾಜರಾಗಲು ಆಗಿರುವುದಿಲ್ಲ.

ದಿನಾಂಕಃ 24.06.2024 ರದು ಅಸಲು ದಾವೆಯಲ್ಲಿ ತೀರ್ಪು ಬಂದಿರುವ ಬಗ್ಗೆ ನನಗೆ ಅಂದೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಅಸಲು ದಾವೆಯಲ್ಲಿ ತೀರ್ಪು ಆದ ಬಗ್ಗೆ ತೀರ್ಪು ಆದ ದಿನವೇ ನನಗೆ ತಿಳಿದುಬಂದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಈ ಮೇಲ್ಮನವಿಯನ್ನು ತಡವಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2ನೇ ಎದುರುದಾರರ ಪರ ವಕೀಲರಿಂದಃ-**

2ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರುಹಾಜರು. ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.